ಅ) ಉಡುಪಿಯಲ್ಲಿ ಜಿಲ್ಲಾ ನ್ಯಾಯಾಲಯವನ್ನು ಪ್ರಾರಂಭಿಸುವ ಪ್ರಶ್ನೆಯು ಯಾವ ಹಂತದಲ್ಲಿದೆ.

ಆ) ರಾಜ್ಯ ಉಚ್ಚ ನ್ಯಾಯಾಲಯವು ಈ ಕುರಿತು ತಮ್ಮ ಒಪ್ಪಿಗೆಯನ್ನು ಕೊಟ್ಟಿದೆಯೇ? ಉಚ್ಚ ನ್ಯಾಯಾಲಯದ ಒಪ್ಪಿಗೆ ದೊರೆತ ಕೂಡಲೇ ಜಿಲ್ಲಾ ನ್ಯಾಯಾಲಯವನ್ನು ಉಡುಪಿಯಲ್ಲಿ ಪ್ರಾರಂಭಿಸುವುದಾಗಿ ಸರ್ಕಾರ ಭರವಸೆ ನೀಡಿದ್ದರೂ ಸಹ ವಿಳಂಭವಾಗಲು ಕಾರಣವೇನು?

ಇ) ಹಾಗಿದ್ದಲ್ಲಿ ಜಿಲ್ಲಾ ನ್ಯಾಯಾಲಯವನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :—

ಅ) ಸೂಕ್ತ ಕಟ್ಟಡ : ಸ್ಥಳಾವಕಾಶ ದೊರೆಯದೇ ಇರುವುದರಿಂದ ಉಡುಪಿಯಲ್ಲಿ ಜಿಲ್ಲಾ ನ್ಯಾಯಾಲಯವನ್ನು ಪ್ರಾರಂಭಿಸಿರುವುದಿಲ್ಲ.

ಈ ಬಗ್ಗೆ ಉಚ್ಚ ನ್ಯಾಯಾಲಯದಿಂದ ಉಡುಪಿ ಜಿಲ್ಲಾ ನ್ಯಾಯಾಲಯ ಕಟ್ಟಡವನ್ನು ನಿರ್ಮಿಸಲು ಪ್ರಸ್ತಾವನೆ ಬಂದಿದ್ದು, ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ಆ) ಹೌದು, ಸೂಕ್ತ ಸ್ಥಳಾವಕಾಶ ದೊರೆತ ನಂತರ ಉಡುಪಿಯಲ್ಲಿ ಜಿಲ್ಲಾ ನ್ಯಾಯಾಲಯವನ್ನು ಸ್ಥಾಪಿಸಲಾಗುವುದು.

ಇ) ಮೇಲಿನಂತೆ.

ಕಾರವಾರ ಬಂದರಿನಲ್ಲಿ ಕಂಟೈನರ್ ಹ್ಯಾಂಡ್ಲಿಂಗ್ ವ್ಯವಸ್ಥೆ.

2223 (2718) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) :— ಮಾನ್ಯ ಬಂದರು, ಮೀನುಗಾರಿಕೆ ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಕಾರವಾರ ಬಂದರಿನಲ್ಲಿ ಕಂಟೈನರ್ ಹ್ಯಾಂಡ್ಲಿಂಗ್ ವ್ಯವಸ್ಥೆಯ ಬಗ್ಗೆ ಯಾವ ಖಾಸಗಿ ಸಂಸ್ಥೆಗೆ ಅನುಮತಿ ನೀಡಲಾಗಿದೆ.

ಆ) ಆ ಕುರಿತು ಒಪ್ಪಂದಗಳೇನಾದರೂ ಏರ್ಪಟ್ಟಿದೆಯೇ?

ಇ) ಒಪ್ಪಂದಗಳಾಗಿದಲ್ಲಿ, ವ್ಯವಸ್ಥೆಯನ್ನು ಖಾಸಗಿ ಸಂಸ್ಥೆಯು ನಿರ್ವಹಿಸುತ್ತಿದೆಯೇ? ಇಲ್ಲವಾದಲ್ಲಿ ಸದರಿ ವ್ಯವಸ್ಥೆಯ ವಿಳಂಬಕ್ಕೆ ಕಾರಣಗಳೇನು?

ಶ್ರೀ ಬಿ. ರಮಾನಾಥ್ ರೈ (ಬಂದರು, ಮೀನುಗಾರಿಕೆ ಹಾಗೂ ಪ್ರದೇಶಾಭಿವೃದ್ಧಿ ಸಚಿವರು) :—

ಅ) ಮೆ: ವಿಕ್ರಮ್ ಅಸೋಸಿಯೇಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ನೀಡಲಾಗಿದೆ.

ಅ) ಹೌದು.

ಮೆ. ವಿಕ್ರಮ್ ಅಸೋಸಿಯೇಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ಇವರು ಕಂಟೈನರ್ ಸೇವೆ ಪ್ರಾರಂಭಿಸುವಲ್ಲಿ ಈಗಾಗಲೇ ಪ್ರಾಥಮಿಕ ಸರ್ವೆ ಪೂರ್ವಭಾವಿ ಪರಿಶೀಲನೆ ಇತ್ಯಾದಿಗಳನ್ನು ನಡೆಸಿರುತ್ತಾರೆ. ಇವರೊಂದಿಗೆ ಮಾಡಿಕೊಂಡಿರುವ ಒಪ್ಪಂದ ಮುಂದುವರಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿನ ಬಂದರು ವ್ಯಾಪ್ತಿಯಲ್ಲಿ ಬರುವ ಜಮೀನುಗಳ ವರ್ಗೀಕರಣ.

2224(1855) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿನ ಬಂದರು ವ್ಯಾಪ್ತಿಯಲ್ಲಿ ಬರುವ ಜಮೀನು ಸಿ.ಆರ್.ಜಡ್-2, ಸಿ.ಆರ್.ಜಡ್-3, ಅಡಿಯಲ್ಲಿ ಬರುತ್ತವೆಯೇ? ಸಿ.ಆರ್.ಜಡ್-2 ಅಡಿಯಲ್ಲಿ ಬಂದರೆ ಅದಕ್ಕೆ ಒಳಪಡುವ ನಿಯಮಗಳೇನು?

ಆ) ಸಿ.ಆರ್.ಜಡ್ 1, 2 ಮತ್ತು 3 ಗಳ ವಿವರಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) ರಾಜ್ಯದಲ್ಲಿ ಮಂಗಳೂರು ಬಂದರು ಪ್ರದೇಶದಲ್ಲಿ ಬರುವ ಜಮೀನುಗಳನ್ನು ಹೊರತುಪಡಿಸಿ, ಉಳಿದೆಲ್ಲ ಬಂದರುಗಳಲ್ಲಿ ಬರುವ ಜಮೀನುಗಳು ಸಿ.ಆರ್.ಜಡ್-3 ಎಂದು ವರ್ಗೀಕೃತವಾಗಿವೆ. ಮಂಗಳೂರು ಬಂದರು ವ್ಯಾಪ್ತಿಯಲ್ಲಿ ಬರುವ ಜಮೀನು ಸಿ.ಆರ್.ಜಡ್-2 ಎಂದು ವರ್ಗೀಕೃತಗೊಂಡಿವೆ.

ಆ) ಕಡಲ ತೀರದವರೆಗೆ ಈಗಾಗಲೇ ಅಭಿವೃದ್ಧಿ ಹೊಂದಿರುವ ಎಂದರೆ ನಗರ:ಪಟ್ಟಣ ಪ್ರದೇಶಗಳೆಂದು ನಾಮಾಂಕಿತವಾಗಿರುವ ಪ್ರದೇಶಗಳು ಸಿ.ಆರ್.ಜಡ್ -2 ವ್ಯಾಪ್ತಿಯಲ್ಲಿ ಬರುತ್ತರೆ. ಈ ಪ್ರದೇಶಗಳಲ್ಲಿ ಕರಾವಳಿ ರಸ್ತೆಯ ಅಥವಾ ಅಧಿಕೃತ ಕಟ್ಟಡ ನಿರ್ಮಿಸಲು ಅವಕಾಶವಿದೆ. ಇದು ಸ್ಥಳೀಯ ನಗರ ಯೋಜನಾ ನಿಯಮಗಳಿಗೆ ಒಳಪಟ್ಟಿರಬೇಕಾಗುತ್ತದೆ. ಅಧಿಕೃತ ಕಟ್ಟಡಗಳ ಪುನರ್ ನಿರ್ಮಾಣಕ್ಕೆ ಈಗಿನ ಎಫ್ಎಸ್ಐ: ಎಫ್ಎಆರ್ ನಿಯಮಾವಳಿಗೆ ಒಳಪಟ್ಟು ಹಾಗೂ ಈಗಿನ ಉಪಯೋಗವನ್ನು ಬದಲಿಸುವಂತೆ ಅನುಮತಿ ನೀಡಬಹುದಾಗಿದೆ. ಈ ಕಟ್ಟಡಗಳು ಸ್ಥಳೀಯ ವಾಸ್ತು ಮತ್ತು ಭೂ ದೃಶ್ಯಗಳಿಗೆ ಅನುಗುಣವಾಗಿರಬೇಕು.

ಸಿಆರ್‌ಜಡ್ -1, 2, 3 ರ ಅಡಿಯಲ್ಲಿ ವರ್ಗೀಕರಿಸುವ ಪ್ರದೇಶಗಳ ವಿವರಗಳು ಕೆಳಕಂಡಂತಿವೆ.

ಸಿ.ಆರ್.ಜಡ್ -1

1) ಪರಿಸರಾತ್ಮಕವಾಗಿ ಸೂಕ್ಷ್ಮ ಹಾಗೂ ಪ್ರಮುಖವೆನಿಸಿದ ಪ್ರದೇಶಗಳು.

2) ಎಲ್.ಟಿ.ಎಲ್. ಮತ್ತು ಹೆಚ್.ಟಿ.ಎಲ್. ನಡುವಣ ಪ್ರದೇಶಗಳು